# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 04 |
| ಸದಸ್ಯರ ಹೆಸರು | : | ಶ್ರೀ ಎಂ.ನಾಗರಾಜ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 15.07.2024 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಹಲವಾರು ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? | ಬಂದಿದೆ. |
| ಆ) | ಬಂದಿದ್ದಲ್ಲಿ ಶಾಲೆಗಳಿಗೆ ಉತ್ತಮ ಮೂಲಭೂತ ಸೌಕರ್ಯಗಳ ಕೊರತೆ, ಶಿಕ್ಷಕರ ಕೊರತೆ, ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರಿನ ಪೂರೈಕೆ ಮತ್ತು ಇತ್ಯಾದಿಗಳ ಕೊರತೆ ಬಗ್ಗೆ ಸರ್ಕಾರ ಗಮನ ಹರಿಸಿದಿಯೇ? | ಹೌದು |
| ಇ) | ಇದ್ದಲ್ಲಿ, ಸರ್ಕಾರ ವತಿಯಿಂದ ಈ ಸಮಸ್ಯೆಗಳನ್ನು ಪರಿಹರಿಸಲು ಕೈಗೊಂಡಿರುವ | **ಶಿಕ್ಷಕರ ಕೊರತೆ:**<br>1. ಅಧಿಸೂಚಿಸಲಾದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇದ್ದ 15000 ಹುದ್ದೆಗಳಿಗೆ ಎದುರಾಗಿ 13,352 ಅಭ್ಯರ್ಥಿಗಳು ಅರ್ಹರಾಗಿದ್ದು, ಈ ಪೈಕಿ 12.429 ಅಭ್ಯರ್ಥಿಗಳು 2023-24ನೇ ಸಾಲಿನಲ್ಲಿ ಕೌನ್ಸಿಲಿಂಗ್ಗೆ ಹಾಜರಾಗಿ |

| | | |
|---|---|---|
| | ಕ್ರಮಗಳೇನು: | ಸ್ಥಳ ಆಯ್ಕೆ ಮಾಡಿ ಕೊಂಡಿರುತ್ತಾರೆ ಮತ್ತು 11,494 ಅಭ್ಯರ್ಥಿಗಳು ಈಗಾಗಲೇ ಶಾಲಾ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.<br>**2.** ರಾಜ್ಯದ ಸರ್ಕಾರಿ ಪ್ರಾಥಮಿಕ ಬೋಧಕ ಖಾಲಿ ಹುದ್ದೆಗಳ ಎದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪ್ರತಿ ವರ್ಷದಂತೆ ಪ್ರಸ್ತುತ ಸಾಲಿನಲ್ಲಿಯು ಶೈಕ್ಷಣಿಕ ವರ್ಷದ ಅಂತ್ಯದವರೆಗೆ ತಾತ್ಕಲಿಕವಾಗಿ 33863 ಅತಿಥಿ ಶಿಕ್ಷಕರುಗಳನ್ನು ನೇಮಕ ಮಾಡಿಕೊಂಡು ಶಿಕ್ಷಕರ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗಿದೆ.<br>**3.** 2024-25ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ವಿಷಯ ಶಿಕ್ಷಕರ ಹುದ್ದೆಗಳಿಗೆದುರಾಗಿ ತಾತ್ಕಾಲಿಕವಾಗಿ ಸರ್ಕಾರದ ಆದೇಶ ಸಂಖ್ಯೆ: ಇಪಿ 166 ಎಸ್‌ಇಎಸ್ 2023, ದಿನಾಂಕ:01.06.2024ರ ಆದೇಶದನ್ವಯ ಒಟ್ಟು 8954 ಅತಿಥಿ ಶಿಕ್ಷಕರುಗಳನ್ನು ನೇಮಕ ಮಾಡಿಕೊಳ್ಳಲಾಗಿದೆ,<br>**4.** ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 7500 ಶಿಕ್ಷಕ ಹುದ್ದೆಗಳನ್ನು ಭರ್ತಿ ಮಾಡಲು ಉದ್ದೇಶಿಸಲಾಗಿದ್ದು,ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿದೆ.<br>**5.** ರಾಜ್ಯದ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ 2500 ಶಿಕ್ಷಕ ಹುದ್ದೆಗಳನ್ನು ಭರ್ತಿ ಮಾಡಲು ಉದ್ದೇಶಿಸಲಾಗಿದ್ದು,ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿದೆ<br>**ಮೂಲಭೂತ ಸೌಲಭ್ಯ:**<br>1. ಸಮಗ್ರ ಶಿಕ್ಷಣ-ಕರ್ನಾಟಕ: ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಕಳೆದ 3 ವರ್ಷಗಳಲ್ಲಿ ಶಾಲೆಗಳ ಮೂಲಭೂತ ಸೌಲಭ್ಯಗಳಿಗೆ ಈ ಕೆಳಕಂಡಂತೆ ಅನುದಾನ ಒದಗಿಸಲಾಗಿದೆ.<br>(ರೂ.ಲಕ್ಷಗಳಲ್ಲಿ) |

| ಕ್ರ ಸಂ | ಸಾಲು | ವಿವರಗಳು | ಮಂಜೂರಾದ/ ನಿಗಧಿಪಡಿಸಿರುವ ಅನುದಾನ |
|---|---|---|---|
| 1. | 2022-23 | 48 ಶಾಲಾ ಕೊಠಡಿಗಳ ನಿರ್ಮಾಣ | 867.60 |
| | | 08 ಶಾಲಾ ಕಟ್ಟಡಗಳ ಉನ್ನತೀಕರಣ | 1224.00 |
| 2. | 2023-24 | 08 ಪ್ರೌಢ ಶಾಲಾ ಕಟ್ಟಡಗಳ ಉನ್ನತೀಕರಣ | 1464.00 |
| | | 06 ಹೈಯರ್ ಸೆಕೆಂಡರಿ (11 & 12) | 746.64 |

| | | | |
|---|---|---|---|
| | | ಶಾಲಾ ಕಟ್ಟಡಗಳ ಉನ್ನತೀಕರಣ | |

ಪ್ರಸಕ್ತ 2024–25ನೇ ಸಾಲಿನಲ್ಲಿ ಸಮಗ್ರ ಶಿಕ್ಷಣ ಕರ್ನಾಟಕದಡಿ ಈ ಕೆಳಕಂಡಂತೆ ಶಾಲಾ ಕಾಲೇಜುಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕೇಂದ್ರ PABಯಿಂದ ಅನುಮೋದನೆ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| | ಕಾರ್ಯಕ್ರಮ | ಸಂಖ್ಯೆ | ಘಟಕ ವೆಚ್ಚ | ಒಟ್ಟು ಮೊತ್ತ |
|---|---|---|---|---|
| ಪ್ರಾಥಮಿಕ | ಕುಡಿಯುವ ನೀರಿನ ಸೌಲಭ್ಯ | 03 | 2.1 | 6.30 |
| | ವಿದ್ಯುತ್ ಸೌಲಭ್ಯ | 200 | 0.40 | 80.00 |
| | ಮೇಜರ್ ದುರಸ್ಥಿ | 79 | 10.05 | 793.95 |
| ಪ್ರೌಢ | ಪ್ರೌಢ ಶಾಲಾ ಹೊಸ ಕಟ್ಟಡ ನಿರ್ಮಾಣ | 01 | 210.25 | 210.25 |
| | ಪದವಿ ಪೂರ್ವ ಕಾಲೇಜು ಹೊಸ ಕಟ್ಟಡ ನಿರ್ಮಾಣ | 13 | 206.50 | 2684.50 |
| | ಮೇಜರ್ ದುರಸ್ಥಿ | 52 | 10.23 | 537.29 |

2. ರಾಜ್ಯ ಬಂಡವಾಳ ವೆಚ್ಚ ಯೋಜನೆಯಡಿ ಕಳೆದ 3 ವರ್ಷಗಳಲ್ಲಿ ಕೆ.ಪಿ.ಎಸ್ ಶಾಲೆಗಳ ಮೂಲಭೂತ ಸೌಲಭ್ಯಗಳಿಗೆ ಈ ಕೆಳಕಂಡಂತೆ ಅನುದಾನ ಒದಗಿಸಲಾಗಿದೆ.

**ಕೆ.ಪಿ.ಎಸ್ ಶಾಲೆಗಳು**

| ಕ್ರ ಸಂ | ಸಾಲು | ವಿವರಗಳು | ಮಂಜೂರಾದ/ ನಿಗಧಿಪಡಿಸಿರುವ ಅನುದಾನ ರೂ.ಕೋಟಿಗಳಲ್ಲಿ |
|---|---|---|---|
| 1 | 2020–21 & 2021–22 | 100 ಕೆ.ಪಿ.ಎಸ್ ಶಾಲೆಗಳ ಕಟ್ಟಡ ನಿರ್ಮಾಣ | 200.00 |
| 2 | 2022–23 | 69 ಕೆ.ಪಿ.ಎಸ್ ಶಾಲೆಗಳಲ್ಲಿ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಹಾಗೂ ಮೂಲಭೂತ ಸೌಕರ್ಯ | 70.00 |
| | | ಎಸ್.ಡಿ.ಪಿ ಯೋಜನೆಯಡಿ 82 ಶಾಲೆಗಳಲ್ಲಿ ಕೊಠಡಿಗಳ ನಿರ್ಮಾಣ ಹಾಗೂ | 50.00 |

| | | | |
|---|---|---|---|
| | | ಮೂಲಭೂತ ಸೌಕರ್ಯ | |
| 3 | 2023-24 | ಕೆ.ಪಿ.ಎಸ್ ಶಾಲೆಗಳನ್ನು ಹೊಂದಿಲ್ಲದ 22 ಮಹತ್ವಕಾಂಕ್ಷಿ ತಾಲ್ಲೂಕುಗಳಲ್ಲಿ ಹೊಸದಾಗಿ ಕೆ.ಪಿ.ಎಸ್ ಶಾಲೆಗಳನ್ನು ನಿರ್ಮಿಸಲು | 60.00 |
| | | 38 ಕೆ.ಪಿ.ಎಸ್ ಶಾಲೆಗಳಿಗೆ ಮೂಲಭೂತ ಸೌಕರ್ಯ ಒದಗಿಸಲು | 30.00 |
| 4 | 2024-25 | ಕೆ.ಪಿ.ಎಸ್ ಶಾಲೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು | 30.00 |

ಸರ್ಕಾರಿ ಶಾಲೆಗಳಿಗೆ ಮೂಲಭೂತ ಸೌಲಭ್ಯ ಒದಗಿಸಲು ಕಳೆದ 03 ವರ್ಷಗಳಲ್ಲಿ ಈ ಕೆಳಕಂಡಂತೆ ಅನುದಾನ ಬಿಡುಗಡೆಗೊಳಿಸಲಾಗಿರುತ್ತದೆ.

- **ಸರ್ಕಾರಿ ಶಾಲಾ ಕೊಠಡಿಗಳ ನಿರ್ಮಾಣ:**

| ವರ್ಷ | ಯೋಜನೆ | ಮಂಜೂರಾದ ಶಾಲೆಗಳು | ಮಂಜೂರಾದ ಕಾಮಗಾರಿಗಳ ಸಂಖ್ಯೆ | ಮಂಜೂರಾದ ಅನುದಾನ (ರೂ.ಲಕ್ಷಗಳು) | ಬಿಡುಗಡೆ ಮಾಡಲಾದ ಅನುದಾನ (ರೂ.ಲಕ್ಷಗಳು) |
|---|---|---|---|---|---|
| 2021-22 | ಕೊಠಡಿ ನಿರ್ಮಾಣಕ್ಕೆ ಅನುದಾನ ಬಿಡುಗಡೆಯಾಗಿರುವುದಿಲ್ಲ | | | | |
| 2022-23 | ವಿವೇಕ | 4785 | 6601 | 94393.90 | 46901.84 |
| 2023-24 | ವಿವೇಕ | | | | 16960.61 |
| 2023-24 | CM Grants | 547 | 710 | 8808.00 | 4301.26 |
| ಒಟ್ಟು | | 5332 | 7311 | 103201.90 | 68163.71 |

2024-25ನೇ ಸಾಲಿಗೆ ಸರ್ಕಾರಿ ಶಾಲಾ ಕೊಠಡಿಗಳ ನಿರ್ಮಾಣ ಕಾಮಗಾರಿಗಳಿಗೆ ಮುಂದುವರೆದ ಯೋಜನೆಗೆ ರೂ.23039.49ಲಕ್ಷಗಳು ಮತ್ತು ಹೊಸ ಯೋಜನೆಗೆ ರೂ.11546.41ಲಕ್ಷಗಳು ಸೇರಿ ಒಟ್ಟು ರೂ.34585.9ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದ್ದು ಅಗತ್ಯತೆಗೆ ಅನುಗುಣವಾಗಿ ಕೊಠಡಿ ನಿರ್ಮಿಸಲು ಕ್ರಮವಹಿಸಲಾಗಿದೆ.

➢ **ಸರ್ಕಾರಿ ಶಾಲಾ ಕೊಠಡಿಗಳ ದುರಸ್ತಿ:**

| ವರ್ಷ | ಶಾಲೆಗಳ ಸಂಖ್ಯೆ | ಮಂಜೂರಾದ ಅನುದಾನ (ರೂ.ಲಕ್ಷಗಳಲ್ಲಿ) | ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| 2021-22 | 518 | 1947.00 | 1947.00 |
| 2022-23 | 1833 | 4650.00 | 4650.00 |
| 2023-24 | 2162 | 7000.00 | 7000.00 |
| Total | 4513 | 13597.00 | 13597.00 |

- 2024-25ನೇ ಸಾಲಿಗೆ ಸರ್ಕಾರಿ ಶಾಲಾ ಕೊಠಡಿಗಳ ದುರಸ್ಥಿ ಕಾಮಗಾರಿಗಳಿಗೆ ಮುಂದುವರೆದ ಯೋಜನೆಗೆ ರೂ.5129.66 ಲಕ್ಷಗಳು ಹಾಗೂ ಹೊಸ ಯೋಜನೆಗೆ ರೂ.10000.00ಲಕ್ಷಗಳು ನಿಗದಿಯಾಗಿದ್ದು, ಶಾಲಾ ಕೊಠಡಿ ದುರಸ್ತಿಗೊಳಿಸಲು ಅಗತ್ಯಕ್ರಮವಹಿಸಲಾಗುತ್ತಿದೆ.

➢ **ಸರ್ಕಾರಿ ಶಾಲೆಗಳಿಗೆ ಶೌಚಾಲಯ ನಿರ್ಮಾಣ**

ನರೇಗಾ ಒಗ್ಗೂಡಿಸುವಿಕೆಯ ಮೂಲಕ ರಾಜ್ಯ ವಲಯದ ಯೋಜನೆಯಡಿಯಲ್ಲಿ ಸರ್ಕಾರಿ ಶಾಲೆಗಳ ಶೌಚಾಲಯ ನಿರ್ಮಾಣಕ್ಕಾಗಿ ಕಳೆದ 3 ವರ್ಷಗಳಲ್ಲಿ ಈ ಕೆಳಕಂಡಂತೆ ಅನುದಾನ ಬಿಡುಗಡೆಗೊಳಿಸಲಾಗಿರುತ್ತದೆ.

| ವರ್ಷ | ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|
| 2021-22 | 3500.00 |
| 2022-23 | 3500.00 |
| 2023-24 | 8000.00 |
| ಒಟ್ಟು | 15000.00 |

- 2024-25ನೇ ಸಾಲಿನಲ್ಲಿ ಶೌಚಾಲಯ ನಿರ್ಮಾಣಕ್ಕೆ ರೂ.12279.00 ಲಕ್ಷಗಳ ಅನುದಾನ ನಿಗದಿಯಾಗಿದ್ದು, ಶೌಚಾಲಯ ನಿರ್ಮಾಣಕ್ಕೆ ಕ್ರಮವಹಿಸಲಾಗಿದೆ.

➢ **ಕುಡಿಯುವ ನೀರು ಮತ್ತು ಶೌಚಾಲಯ ನಿರ್ವಹಣೆ**

ಕುಡಿಯುವ ನೀರು ಮತ್ತು ಶೌಚಾಲಯ ನಿರ್ವಹಣೆಗಾಗಿ, ನಿರ್ವಹಣಾ ವೆಚ್ಚವನ್ನು ಕಳೆದ ವರ್ಷಗಳಲ್ಲಿ ಈ ಕೆಳಕಂಡಂತೆ ಬಿಡುಗಡೆ ಮಾಡಲಾಗಿದೆ.

| ವರ್ಷ | ಬಿಡುಗಡೆಯಾದ ಅನುದಾನ (ರೂ.ಲಕ್ಷಗಳು) |
|---|---|
| 2021-22 | 2500.00 |
| 2022-23 | 3500.00 |
| 2023-24 | 7122.00 |

<table>
<tr>
<td></td>
<td></td>
<td>2024–25ನೇ ಸಾಲಿನಲ್ಲಿ ಕುಡಿಯುವ ನೀರು ಮತ್ತು ಶೌಚಾಲಯ ನಿರ್ವಹಣೆಗಾಗಿ, ರೂ.117.40 ಲಕ್ಷಗಳ ಅನುದಾನ ನಿಗಧಿಪಡಿಸಲಾಗಿದೆ.<br><br>➢ ಸರ್ಕಾರಿ ಶಾಲೆಗಳಿಗೆ ಪಿಠೋಪಕರಣಗಳು<br>2021–22 ಮತ್ತು 2022–23ನೇ ಸಾಲಿಗೆ ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಅಗತ್ಯತೆಗನುಗುಣವಾಗಿ ಪೀಠೋಪಕರಣ ಒದಗಿಸಲು ರೂ. 7000.00 ಲಕ್ಷಗಳ ಅನುದಾನ ಮಂಜೂರಾಗಿ, ಜಿಲ್ಲೆಗಳಿಗೆ ಬಿಡುಗಡೆಗೊಳಿಸಲಾಗಿದೆ ಹಾಗೂ ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.</td>
</tr>
<tr>
<td>ಈ)</td>
<td>ರಾಜ್ಯದಲ್ಲಿ ಕನ್ನಡ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಉನ್ನತೀಕರಣಗೊಳಿಸಲು ಹಾಗೂ ಹೊಸ ಕನ್ನಡ ಮಾಧ್ಯಮದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು:</td>
<td>ಕೇಂದ್ರ ಶಿಕ್ಷಣ ಮಂತ್ರಾಲಯದ Opening of new schools/ Upgradation of schools ಕಾರ್ಯಕ್ರಮದಡಿ ಕೇಂದ್ರ ಶಿಕ್ಷಣ ಮಂತ್ರಾಲಯದ ಮಾನದಂಡಗಳನ್ವಯ ಜಿಲ್ಲೆಗಳಿಂದ ಬಂದ ಅರ್ಹ ಪ್ರಸ್ತಾವನೆಗಳಿಗೆ ಕೇಂದ್ರ ಶಿಕ್ಷಣ ಮಂತ್ರಾಲಯದ ಅನುಮೋದನೆ ಪಡೆದು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಪೈಕಿ 2009–10ನೇ ಸಾಲಿನಿಂದ 2024–25ನೇ ಸಾಲಿನ ವರೆಗೆ ಒಟ್ಟು 520 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢಶಾಲೆಗಳಾಗಿ ಉನ್ನತೀಕರಿಸಲಾಗಿದೆ ಹಾಗೂ 2023–24ನೇ ಸಾಲಿನಲ್ಲಿ 06 ಸರ್ಕಾರಿ ಪ್ರೌಢ ಶಾಲೆಗಳನ್ನು ಮತ್ತು 2024–25ನೇ ಸಾಲಿನಲ್ಲಿ 13 ಸರ್ಕಾರಿ ಪ್ರೌಢ ಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸಲಾಗಿದೆ.<br><u>ಪ್ರಾಥಮಿಕ ಶಾಲೆಗಳು:</u><br>1) 2024–25ನೇ ಸಾಲಿನಲ್ಲಿ ಸರ್ಕಾರಿ ಶಾಲೆಗಳ ಬಲವರ್ಧನೆಗಾಗಿ ಹಾಲಿ ನಡೆಯುತ್ತಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳಾಗಿ ಹಾಗೂ 1 ರಿಂದ 7ನೇ ತರಗತಿ ನಡೆಯುತ್ತಿರುವ ಶಾಲೆಗಳಲ್ಲಿ 8ನೇ ತರಗತಿಗೆ ಈ ಕೆಳಕಂಡಂತೆ ಉನ್ನತೀಕರಿಸಲಾಗಿದೆ.
<table>
<tr><th>ಕ್ರ ಸಂ</th><th>6ನೇ ತರಗತಿಗೆ ಉನ್ನತೀಕರಣ</th><th>8ನೇ ತರಗತಿ ಉನ್ನತೀಕರಣ</th></tr>
<tr><td>1</td><td>55</td><td>41</td></tr>
</table>
2) ಹೊಸ ಪ್ರಾಥಮಿಕ ಶಾಲೆ ಮಂಜೂರಾತಿ ಕೋರಿ ಯಾವುದೇ ಪ್ರಸ್ತಾವನೆಗಳು ಸ್ವೀಕೃತವಾಗಿರುವುದಿಲ್ಲ. ಈಗಾಗಲೇ ಪ್ರತಿ 1 ಕಿ.ಮೀ ವ್ಯಾಪ್ತಿಯಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ಮತ್ತು 3 ಕಿ.ಮೀ ವ್ಯಾಪ್ತಿಯಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಹಾಗೂ 5 ಕಿ.ಮೀ ವ್ಯಾಪ್ತಿಯಲ್ಲಿ ಸರ್ಕಾರಿ ಪ್ರೌಢ ಶಾಲೆಗಳನ್ನು ತೆರೆಯಲಾಗಿರುತ್ತದೆ. ಪ್ರಯುಕ್ತ ಹೊಸ ಶಾಲೆಗಳ ಮಂಜೂರಾತಿ ಅವಶ್ಯವಿರುವುದಿಲ್ಲ.<br><u>ಸರ್ಕಾರಿ ಪ್ರೌಢ ಶಾಲೆಗಳ ಉನ್ನತೀಕರಣ ಸಂಬಂಧ:</u><br>2024–25ನೇ ಸಾಲಿನಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢಶಾಲೆಗಳನ್ನಾಗಿ ಉನ್ನತೀಕರಿಸುವ ಸಂಬಂಧ ಒಟ್ಟು 279 ಪ್ರಸ್ತಾವನೆಗಳು ಸ್ವೀಕೃತವಾಗಿದ್ದು ಸದರಿ ಪ್ರಸ್ತಾವನೆಗಳಲ್ಲಿ 45 ಸ.ಹಿ.ಪ್ರಾ.ಶಾಲೆಗಳನ್ನು ಪ್ರೌಢಶಾಲೆಗಳನ್ನಾಗಿ ಉನ್ನತೀಕರಿಸಲು, 25 ಶಾಲೆಗಳಿಗೆ ಹತ್ತಿರದಲ್ಲಿರುವ ಸರ್ಕಾರಿ</td>
</tr>
</table>

ಪ್ರೌಢಶಾಲೆಗಳಲ್ಲಿ ಉರ್ದು ವಿಭಾಗ ತೆರೆಯಲು, 4 ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಗಳನ್ನು ಉರ್ದು ಸರ್ಕಾರಿ ಪ್ರೌಢಶಾಲೆಗಳನ್ನಾಗಿ ಉನ್ನತೀಕರಿಸಲು ಹಾಗೂ 11 ಕೆ.ಪಿ.ಎಸ್. ಸ.ಹಿ.ಪ್ರಾ.ಶಾಲೆಗಳನ್ನು ಸರ್ಕಾರಿ ಪ್ರೌಢಶಾಲೆಗಳನ್ನಾಗಿ ಉನ್ನತೀಕರಿಸಲು ಪ್ರಸ್ತಾವನೆ ಸ್ವೀಕೃತವಾಗಿದ್ದು ಪ್ರಸ್ತಾವನೆಗಳು ಪರಿಶೀಲನೆಯಲ್ಲಿವೆ.

ಪ್ರಸಕ್ತ, 2024–25ನೇ ಸಾಲಿನಲ್ಲಿ ಸರ್ಕಾರಿ ಪ್ರೌಢ ಶಾಲೆ ಲಲಿತಾದಿಪುರ, ಮೈಸೂರು ಜಿಲ್ಲೆ, ಈ ಶಾಲೆಯನ್ನು ಪ್ರೌಢ ಶಾಲೆಯನ್ನಾಗಿ ಉನ್ನತಿಕರಿಸಲು ಅನುಮೋದನೆ ನೀಡಲಾಗಿದೆ.

ಕಳೆದ 2023–24ನೇ ಸಾಲಿನಲ್ಲಿ ಈ ಕೆಳಕಂಡಂತೆ ಪ್ರಾಥಮಿಕ ಶಾಲೆಗಳನ್ನು ಪ್ರೌಢ ಶಾಲೆಗಳಾಗಿ ಉನ್ನತೀಕರಿಸಿ ಆದೇಶಿಸಲಾಗಿದೆ.

| ವರ್ಷ | ಸರ್ಕಾರಿ ಆದೇಶ ಸಂಖ್ಯೆ | ಮಂಜೂರಾದ ಸರ್ಕಾರಿ ಪ್ರೌಢ ಶಾಲೆಗಳು |
|---|---|---|
| | ಇಪಿ 95 ಎಸ್ ಓ ಹೆಚ್ 2023, ಬೆಂಗಳೂರು ದಿನಾಂಕ:04.09.2023 | ಕಲಬುರ್ಗಿ ತಾಲ್ಲೂಕಿನಲ್ಲಿ ಈ ಕೆಳಕಂಡ ಪ್ರೌಢ ಶಾಲೆಗಳನ್ನು ಮಂಜೂರು ಮಾಡಲಾಗಿದೆ.<br>1. ಹಿರೇವಡ್ರಕಲ್<br>2. ಲಿಂಗನಬಂಡಿ<br>3. ಮುಧೋಳ (ಬಾಲಕಿಯರ ಪ್ರೌಢ ಶಾಲೆ)<br>4. ಯಡಿಯಾಪುರ<br>5. ಮಂಗಳೂರು (ಬಾಲಕಿಯರ ಪ್ರೌಢ ಶಾಲೆ) |
| 2023–24 | ಇಪಿ 450 ಎಸ್‌ಇಎಸ್ 2023, ಬೆಂಗಳೂರು, ದಿನಾಂಕ:19.10.2023 | ಕೊಪ್ಪಳ ಜಿಲ್ಲೆ ಯಲಬುರ್ಗಾ ಪಟ್ಟಣದ ಸರ್ಕಾರಿ ಆಂಗ್ಲ ಉರ್ದು ಪ್ರೌಢ ಶಾಲೆ |
| | ಇಪಿ 47 ಎಸ್.ಇ.ಎಸ್ 2024, ಬೆಂಗಳೂರು, ದಿನಾಂಕ:14.03.2024 | ಕೊಪ್ಪಳ ಜಿಲ್ಲೆ ಯಲಬುರ್ಗಾ ಮತ್ತು ಕುಕನೂರು ತಾಲ್ಲೂಕುಗಳಲ್ಲಿ ಈ ಕೆಳಕಂಡ ಶಾಲೆಗಳನ್ನು ಉನ್ನತೀಕರಿಸಲಾಗಿದೆ.<br>1. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ದಮ್ಮೂರು.<br>2. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಚಿಕ್ಕೊಪ್ಪ ಹೊಸಹಳ್ಳಿ<br>3. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕೋಮಲಾಪುರ<br>4. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಚಿಕ್ಕೇನಕೊಪ್ಪ |

| | | | | |
|---|---|---|---|---|
| | | 2024-25 | ಇಪಿ 89 ಎಸ್‌ಇಎಸ್ 2024, ಬೆಂಗಳೂರು, ದಿನಾಂಕ.27.06.2024 | 5. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವೀರಾಪುರ ಕುಕನೂರು ತಾಲ್ಲೂಕು ಕೊಪ್ಪಳ ಜಿಲ್ಲೆ. |
| ಉ) | ಸರ್ಕಾರದ ವತಿಯಿಂದ ರಾಜ್ಯ ಶಿಕ್ಷಣ ನೀತಿಯನ್ನು ಜಾರಿಗೆ ತರಲು ಕ್ರಮಕೈಗೊಂಡಿದ್ದು, ಈ ಪ್ರಕ್ರಿಯೆ ಯಾವ ಹಂತದಲ್ಲಿದೆ ಮತ್ತು ಈ ನೀತಿಯನ್ನು ಜಾರಿಗೆ ತರಲು ಕೇಂದ್ರ ಸರ್ಕಾರವು ಅನುಮತಿ ನೀಡಿದೆಯೇ? | ಸರ್ಕಾರದ ವತಿಯಿಂದ ರಾಜ್ಯ ಶಿಕ್ಷಣ ನೀತಿಯನ್ನು ಜಾರಿಗೆ ತರಲು ಉನ್ನತ ಶಿಕ್ಷಣ ಇಲಾಖೆಯಿಂದ ರಾಜ್ಯ ಶಿಕ್ಷಣ ಆಯೋಗವನ್ನು ಶ್ರೀ.ಸುಖದೇವ್‌ತೋರಟ್ ಅವರ ಅಧ್ಯಕ್ಷತೆಯಲ್ಲಿ ರಚಿಸಿದ್ದು, ಅದರ ಮುಖಾಂತರ ಹಲವಾರು ಶೈಕ್ಷಣಿಕ ವಿಷಯವನ್ನು ಆಧರಿಸಿ, 13 ಅನುಷ್ಠಾನ ಕಾರ್ಯಪಡೆ ಸಮಿತಿಗಳನ್ನು ರಚಿಸಿದ್ದು, ನೂತನ ಶಿಕ್ಷಣ ನೀತಿಯನ್ನು ಜಾರಿಗೊಳಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.<br>ರಾಜ್ಯ ಸರ್ಕಾರವು ತನ್ನ ವ್ಯಾಪ್ತಿಯಲ್ಲಿನ ಅಧಿಕಾರದನ್ವಯ ರಾಜ್ಯ ಶಿಕ್ಷಣ ನೀತಿಯನ್ನು ರೂಪಿಸಿ ಅನುಷ್ಠಾನಗೊಳಿಸಲು ಕ್ರಮಕೈಗೊಂಡಿದೆ. | | |

ಇಪಿ 196 ಯೋಸಕ 2024

(ಎಸ್.ಮಧುಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು